

ಆಪ್ತ ಮಿತ್ರರು...
ಎಸ್‌ಪಿಬಿ ಹಾಗೂ ನಟ ವಿಷ್ಣುವರ್ಧನ್

ಅವರು ಖುಷಿಯಿಂದ ತಿಂದು, 'ನನ್ನನ್ನು ಇನ್ನೂ ದೊಡ್ಡ ಅಪ್ಪ..' ಮಾಡ್ತೀಯಾ ಹೇಗೆ?' ಎಂದು ಕಿಚಾಯಿಸಿದ್ದರು.

ಜೂನ್ 4 ಅವರ ಹುಟ್ಟುಹಬ್ಬ. ಪ್ರತೀವರ್ಷ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಹೇಳ್ತಿದ್ದೆ. ನಾನು ಫೋನ್ ಮಾಡಿದ ಕೂಡಲೇ 'ಹ್ಯಾಪಿ ಬರ್ತ್‌ಡೇ ಟು ಮಿ' ಅಂತ ಹೇಳಿ ನಗೋರು. ನನ್ನ ಬರ್ತ್‌ಡೇ ಇದ್ದಾಗಲೂ ಫೋನ್ ಮಾಡಿ ಶುಭಾಶಯ ಹೇಳೋರು. ಜೊತೆಗೆ 'ಶತಮಾನಂ ಭವತು ಶತಾಯುಃ' ಎಂಬ ಶ್ಲೋಕ ಹೇಳ್ತಿದ್ರು. ನನ್ನ ಮದುವೆ ಇದೆ ಎಂದಾಗ, 'ನಾನು ಬಂದೇ ಬರ್ತೀನಿ. ನೀನು ಟೈಂ ಮತ್ತು ಜಾಗ ಹೇಳು ಸಾಕು' ಅಂತ ಹೇಳಿದ್ರು. ಹಾಗೇ ಬಂದು ಆಶೀರ್ವಾದ ಮಾಡಿ ಹೋಗಿದ್ರು.

ಕನ್ನಡದ ಹಾಡು ಹಾಡುವಾಗ ಯಾವ ಶಬ್ದವಾದರೂ ಗೊತ್ತಾಗದೇ ಇದ್ರೆ ತಕ್ಷಣ ನನಗೆ ಫೋನ್ ಮಾಡ್ತಾ ಇದ್ರು. 'ಮಗಳೇ ಇದರ ಅರ್ಥ ಏನು?' ಅಂತ. ನನಗೂ ಗೊತ್ತಾಗದೇ ಇದ್ರೆ ನಾನು ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಫೋನ್ ಮಾಡಿ ಕೇಳಿ ತಿಳ್ಕೊಂಡು ಅವರಿಗೆ ತಿಳಿಸ್ತಾ ಇದ್ದೆ.

ಭೈರವಿ ರಾಗ ಅವರಿಗೆ ತುಂಬ ಇಷ್ಟ. ಒಮ್ಮೆ 'ಇದೇ ಬ್ರಹ್ಮಜ್ಞಾನ ನೋಡಿಕೊ...' ಎಂಬ ಹಾಡಿಗೆ ಭೈರವಿ ಹಾಗೂ ಭಿಲಾಸ್‌ಖಾನಿ ತೋಡಿ ರಾಗವನ್ನು ಮಿಶ್ರಣ ಮಾಡಿ ರಾಗ ಸಂಯೋಜನೆ ಮಾಡಿದ್ದೆ. ಹಾಡು ಮುಗಿದ ಮೇಲೆ ನನ್ನ ಬಳಿ ಬಂದ ಎಸ್‌ಪಿಬಿ, 'ತುಂಬ ಚೆನ್ನಾಗಿ ರಾಗ ಸಂಯೋಜನೆ ಮಾಡಿದ್ದೀಯಾ' ಅಂದ್ರು. ಈ ಹಾಡನ್ನು ನೀವು ಹಾಡಿ ರೆಕಾರ್ಡ್ ಮಾಡಿ ಕೊಡಿ ಎಂದೆ. ತಕ್ಷಣ ಒಪ್ಪಿಕೊಂಡು ಲಿರಿಕ್ಸ್ ಟ್ರ್ಯಾಕ್ ಕಳಿಸೋದಕ್ಕೆ ಹೇಳಿದ್ರು. ನಾನು ಕಳಿಸಿದೆ. ಆ ಕನ್ನಡ ಹಾಡನ್ನು ಹಾಡಿ ನನಗೆ ಕಳಿಸಿದ್ರು. ತುಂಬ ಚೆನ್ನಾಗಿ ಹಾಡಿದ್ದೀರಿ ಎಂದೆ. ಆಗ ಅವರು 'ನಾನು ಹಿರಿಯ ಗಾಯಕ ಅಂತ ತಪ್ಪಿದ್ದರೆ ಹೇಳೋದಕ್ಕೆ ಸಂಕೋಚ ಮಾಡ್ಬಾರ್ದು. ತಪ್ಪಾಗಿದ್ದರೆ ಹೇಳು. ನಾನು ಸಿಂಗರ್, ನೀನು ಕಂಪೋಸರ್. ತಪ್ಪು ಮಾಡಿದ್ರೆ ಮತ್ತೆ ಹಾಡಿ ಕಳಿಸುವೆ' ಎಂದರು. ಎಂಥ ವಿಧೇಯತೆ, ಎಂಥ ದೊಡ್ಡತನ!

ಸ್ಟೇಜ್ ಮೇಲೆ ಹಾಡುವಾಗ ಮೈಕ್ ಪೊಸಿಷನ್ ಹೇಗಿರಬೇಕು, ಹೈ ನೋಟ್ಸ್ ಬಂದಾಗ ಮೈಕ್ ಲೆವೆಲ್ ಎಲ್ಲಿರಬೇಕು, ಲೋ ನೋಟ್ಸ್ ಹಾಡುವಾಗ ಹೇಗಿರಬೇಕು ಎಂದು ತಿಳಿಸೋರು , ಲಿಪ್‌ಮೂಮೆಂಟ್ಸ್ ಬಗ್ಗೆ ಮಾಹಿತಿ ಕೊಡೋರು. ಅದೇ ರೀತಿ ನಾನು ಅವರೊಂದಿಗೆ ಡ್ಯುಯಟ್ ಹಾಡುವಾಗ ಎಲ್ಲಾದರೂ ತಪ್ಪಿದರೆ ಎಲ್ಲರ ಮುಂದೆ ಏನೂ ಹೇಳುತ್ತಿರಲಿಲ್ಲ. ಬೈಯೋದು, ಕೋಪ ಮಾಡೋದು ಇಲ್ಲವೇ ಇಲ್ಲ. ಹಾಡು ಮುಗಿದ ಮೇಲೆ ಕೂಡ 'ನಾನೂ ತಪ್ಪು ಮಾಡ್ತೀನಮ್ಮ, ಯಾರೂ ನಿಂಗೆ ಗಲ್ಲುಶಿಕ್ಷೆ ಕೊಡಲ್ಲ ತಪ್ಪಾಗಿ ಹಾಡಿದ್ರೆ' ಅನ್ನೋರು. ಆಗ, ಎಷ್ಟು ಸಂಸ್ಕಾರವಂತರಪ್ಪ ಇವರು ಎಂದು ಅಚ್ಚರಿಪಟ್ಟಿದ್ದೆ.

ಕಾಳಜಿ ಕಂಡು ಬೆರಗಾಗಿದ್ದೆ...! ಒಮ್ಮೆ ಅರಬ್ ದೇಶದ ದೋಹಾಕ್ಕೆ ಕಾರ್ಯಕ್ರಮವೊಂದರಲ್ಲಿ ಹಾಡೋದಕ್ಕೆ ಹೋಗಿದ್ವಿ. ಟೀಮ್‌ನಲ್ಲಿದ್ದವರು ಎಲ್ಲರೂ ಗಂಡಸರೇ. ನಾನೊಬ್ಬಳೇ ಮಹಿಳೆ. ದುಬೈ ಏರ್‌ಪೋರ್ಟ್‌ನಲ್ಲಿ ಒಳಗೆ ಹೋಗುವಾಗ ಏನೋ ತೊಂದರೆ ಆಗಿ ಸಿಕ್ಕಿಹಾಕೊಂಡು ಬಿಟ್ಟೆ. ಉಳಿದವರೆಲ್ಲ ಮುಂದೆ ಹೋಗಿದ್ದರು. ನಾನು ತೊಂದರೆಗೊಳಗಾದದ್ದು ನೋಡಿ ಅವರು ಕಾರ್ಯಕ್ರಮ ಸಂಘಟಕರಿಗೆ ತಕ್ಷಣ ಫೋನ್ ಮಾಡಿ ತಿಳಿಸಿ ನನ್ನನ್ನು ಒಳಗೆ ಹೋಗುವಂತೆ ಸಹಾಯ ಮಾಡಿದ್ರು. ಬಹಳ ಕಾಳಜಿ, ಕೇರ್ ತಗೊಂಡ್ರು.

ಇನ್ನೊಮ್ಮೆ ಚೆನ್ನೈಗೆ ಜ್ಯೂಲಿ ಲಕ್ಷ್ಮಿ ಅವರ ಮನೆಗೆ ಹೋಗಬೇಕಾಗಿತ್ತು. ಚೆನ್ನೈ ಏರ್‌ಪೋರ್ಟ್‌ನಲ್ಲಿ ಎಕ್ಸಿಟ್ ಜಾಗದೊಳಗೆ ಹೋಗಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದೆ. ಏನು ಮಾಡಬೇಕು ಎಂದು ತೋಚಲಿಲ್ಲ. ಆತಂಕ ಭಯದ ಮಧ್ಯೆ ದೊಡ್ಡಪ್ಪಂಗೆ ಫೋನ್ ಮಾಡಿದೆ. ತಕ್ಷಣ ನಾನಿದ್ದ ಜಾಗಕ್ಕೆ ಬಂದು ಸೆಕ್ಯೂರಿಟಿ ಹತ್ತಿರ ಮಾತನಾಡಿ ನನ್ನನ್ನು ಬಚಾವ್ ಮಾಡಿದ್ರು. ಕೊನೆಗೆ ಅವರ ಕಾರಿನಲ್ಲೇ ಲಕ್ಷ್ಮಿ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟರು.

ದೊಡ್ಡಪ್ಪ ಇನ್ನು ನೆನಪು ಮಾತ್ರ. ಆದರೆ ಅವರು ಹಾಕಿಕೊಟ್ಟ ಸಂಗೀತ ಹೆಜ್ಜೆಗಳೇ ನನಗೆ ದಾರಿದೀಪ. ಹೋಗಿ ಬನ್ನಿ ದೊಡ್ಡಪ್ಪ...!

ಪ್ರತಿಕ್ರಿಯಿಸಿ: feedback@sudha.co.in